ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-1 , ಸಂಚಿಕೆ-1 ತ್ರೈಮಾಸಿಕ, ಜನವರಿ-ಮಾರ್ಚ್ 2014 ಪುಟಗಳು-12

**ಗೃಹಪತ್ರಿಕೆಯ ಪ್ರಥಮ ಸಂಚಿಕೆಯನ್ನು ಬೆಸ್ಕಾಂನ ಎಲ್ಲಾ ಲೈನ್‌ಮೆನ್‌ಗಳಿಗೆ ಸಮರ್ಪಿಸುತ್ತಿದ್ದೇವೆ**




ಬೆಸ್ಕಾಂ ಇತಿಹಾಸ

ವಿದ್ಯುತ್ ಸುರಕ್ಷೆ ನಮ್ಮ ಕರ್ತವ್ಯ

ವಿದ್ಯುತ್ ಸರಬರಾಜುಗಾಗಿ ವಿತರಣ ಲೈಸೆನ್ಸುದಾರರ ಷರತ್ತುಗಳು

ಹಬ್ಬ-ರಾಷ್ಟ್ರೀಯ ದಿನಾಚರಣೆ


...ಇನ್ನೂ ಹಲವು ವಿಷಯಗಳು ಒಳಪುಟಗಳಲ್ಲಿ

**ವಿದ್ಯುತ್ ಸುರಕ್ಷತೆ ಮತ್ತು ಉಳಿತಾಯ ನಮ್ಮೆಲ್ಲರ ಆದ್ಯತೆಯಾಗಲಿ**

## ಗೃಹಪತ್ರಿಕೆಯ ಪ್ರಥಮ ಸಂಚಿಕೆಯನ್ನು ಬೆಸ್ಕಾಂನ ಎಲ್ಲಾ ಲೈನ್‌ಮೆನ್‌ಗಳಿಗೆ ಸಮರ್ಪಿಸುತ್ತಿದ್ದೇವೆ.










ಸ್ವಾತಂತ್ರ್ಯ ಪಡೆಯಲು ನಿಂತಾತ
ಪಾಲಿಸಿದ ಅಹಿಂಸೆ, ಸತ್ಯಾಗ್ರಹ ಮಾರ್ಗ
ತನ್ನ ಸ್ಫೂರ್ತಿಯ ಮಾತ ನಡತೆಯಲಿ
ಹಚ್ಚಿದ ದೇಶಭಕ್ತಿಯ ಹಣತೆ ಎಲ್ಲರಲಿ
ಮೇಲುಕೀಳು ಭೇದವ ತೊರೆದಾತ
ಹಿಂದು-ಮುಸ್ಲಿಮ್ ಭೇದವ ಮುರಿದಾತ
ಎಲ್ಲರೂ ತನ್ನವರು
ನಾವೆಲ್ಲರೂ ಭಾರತಾಂಬೆಯ ಮಕ್ಕಳು ಎಂದಾತ
ತುಳಿಯುತ್ತಿದ್ದ ಬ್ರಿಟಿಷರೊಂದಿಗೆ ಮುನಿದು
ನಡೆದಾತ
ಭರತಮಾತೆಯನ್ನು ಪರತಂತ್ರದಿಂದ
ಮುಕ್ತಿಗೊಳಿಸಿದ
ಇಂದಿರುವುದೊಂದೆ ಅವನ ನೆನಪು, ತತ್ವ
ಆತನೇ ನಮ್ಮ ಗಾಂಧಿ ತಾತ.

**- ಕವಿತಾ ಕೆ**
ಸಹಾಯಕ ಇಂಜಿನಿಯರ್(ವಿ)
ನಿಗಮ ಕಾರ್ಯಾಲಯ, ಬೆವಿಕಂ

ಸಮಾಧಾನ ಸಾಧನೆಯಲ್ಲಿಲ್ಲ, ಪ್ರಯತ್ನ ಪಡುವುದರಲ್ಲಿದೆ. ಪೂರ್ಣ ಪ್ರಯತ್ನವೇ ಪೂರ್ಣ ಗೆಲುವು. -**ಮಹಾತ್ಮ ಗಾಂಧಿ**



**ಸಿದ್ದರಾಮಯ್ಯ**
**ಮುಖ್ಯ ಮಂತ್ರಿ**

ಸಿಎಂ/ಊಎಸ್/೨೮೬/2013

ವಿಧಾನ ಸೌಧ
ಬೆಂಗಳೂರು - 560 001

ದಿನಾಂಕ 30-12-2013

## ಸಂದೇಶ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ***ಬೆಸ್ಕಾಂ ಸ್ನೇಹಿ*** ತ್ರೈ-ಮಾಸಿಕ ಗೃಹ ಪತ್ರಿಕೆಯನ್ನು ಪ್ರಕಟಿಸುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿದ್ಯುತ್ ಕ್ಷೇತ್ರದ ನೂತನ ಆವಿಷ್ಕಾರಗಳು, ಹೊಸ ಯೋಜನೆಗಳು, ಕಂಪನಿಯ ಅಧಿಕಾರಿ ಮತ್ತು ಸಿಬ್ಬಂದಿಯ ಸಾಧನೆಗಳನ್ನು ಚಿತ್ರಿಸಲು ತಮ್ಮ ಈ ತ್ರೈ-ಮಾಸಿಕವು ಅತ್ಯುತ್ತಮ ವೇದಿಕೆಯಾಗಲಿ. ಅಂತೆಯೇ, ಕಂಪನಿಯಲ್ಲಿನ ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಮತ್ತಷ್ಟು ಸದೃಢಗೊಳಿಸಲು ***ಬೆಸ್ಕಾಂ ಸ್ನೇಹಿ*** ಪೂರಕವಾಗಲಿ ಎಂದು ಆಶಿಸುತ್ತೇನೆ.

ಕಂಪನಿಯಲ್ಲಿ ಗ್ರಾಹಕ ಸ್ನೇಹಿ ವಾತಾವರಣ ಸೃಷ್ಟಿಸಲು ***ಬೆಸ್ಕಾಂ ಸ್ನೇಹಿ*** ಇತರೆ ಕಂಪನಿಗಳಿಗೂ ಮಾದರಿಯಾಗಲಿ ಎಂದು ಹಾರೈಸುತ್ತೇನೆ.

(ಸಿದ್ದರಾಮಯ್ಯ)



**ಆತ್ಮೀಯರೇ,**

ಬೆಸ್ಕಾಂ ಸಂಸ್ಥೆಯ ಗೃಹ ಪತ್ರಿಕೆ "ಬೆಸ್ಕಾಂ ಸ್ನೇಹಿ" ಹೆಸರಿನಲ್ಲಿ ತ್ರೈಮಾಸಿಕವಾಗಿ ಮತ್ತೆ ಆರಂಭವಾಗುತ್ತಿರುವುದು ಸಂತೋಷದ ಸಂಗತಿ.

ಬೆಸ್ಕಾಂ ಎಲ್ಲ ಕಾರ್ಯ ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ಬೆಳಕು ಚೆಲ್ಲುವ ಮೂಲಕ ಸಂಸ್ಥೆಯ ಸಮಸ್ತ ಸಮುದಾಯಕ್ಕೆ ಮಾಹಿತಿ ಒದಗಿಸುವ ನಿಮ್ಮ ಈ ಪ್ರಯತ್ನ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು

ವಂದನೆಗಳೊಂದಿಗೆ,

**-ಡಾ: ಅಮಿತಾ ಪ್ರಸಾದ್,** ಐಎಎಸ್
ಅಧ್ಯಕ್ಷರು, ಬೆಸ್ಕಾಂ
ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ



**ಆತ್ಮೀಯ ಸಹೋದ್ಯೋಗಿಗಳೇ,**

ಮೊದಲನೆಯದಾಗಿ ತಮ್ಮೆಲ್ಲರಿಗೂ ಹೊಸವರ್ಷದ ಹಾರ್ದಿಕ ಶುಭಾಶಯಗಳು.

ಜನವರಿ ತಿಂಗಳನ್ನು ಬೆಸ್ಕಾಂ ವಿದ್ಯುತ್ ಸುರಕ್ಷತಾ ಮಾಸವಾಗಿ ಆಚರಿಸುತ್ತಿರುವ ಸಂದರ್ಭದಲ್ಲಿ ಸಂಸ್ಥೆಯ ಗೃಹಪತ್ರಿಕೆ "ಬೆಸ್ಕಾಂ ಸ್ನೇಹಿ" ಪುನರಾರಂಭಗೊಳ್ಳುತ್ತಿರುವುದು ಸಂತೋಷದ ವಿಷಯ.

ಈ ಪತ್ರಿಕೆಯು ಸಂಸ್ಥೆಯ ಮುಖವಾಣಿಯಾಗಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಮಧ್ಯೆ ಸೌಹಾರ್ದತೆ ಬೆಳೆಸುವ ಸಾಧನವಾಗಲಿ ಎಂದು ಆಶಿಸುತ್ತೇನೆ.

ಬೆಸ್ಕಾಂ ಸಂಸ್ಥೆಯನ್ನು ಏಷ್ಯಾದ ನಂ.1 ವಿದ್ಯುತ್ ವಿತರಣಾ ಕಂಪನಿಯನ್ನಾಗಿಸುವ ಧ್ಯೇಯವನ್ನು ಗುರಿಯಾಗಿಟ್ಟುಕೊಂಡು ನಾವೆಲ್ಲರೂ ಕರ್ತವ್ಯ ನಿರ್ವಹಿಸೋಣ.

**-ಪಂಕಜ್ ಕುಮಾರ್ ಪಾಂಡೆ,** ಐಎಎಸ್
ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ



**ಸಹೋದ್ಯೋಗಿಗಳೇ,**

ಬೆಸ್ಕಾಂನ ಗೃಹ ಪತ್ರಿಕೆಯ ಹೊಸ ಆವೃತ್ತಿ ಬಿಡುಗಡೆಗೊಳ್ಳುತ್ತಿರುವುದು ಸಂತಸದ ವಿಷಯ. ಈ ಗೃಹ ಪತ್ರಿಕೆಯೂ ಬೆಸ್ಕಾಂನ ಕಾರ್ಯಸಾಧನೆ, ಪ್ರಗತಿಪರ ಕ್ರಮಗಳು ಹಾಗೂ ಇಲಾಖೆಯ ಇತರ ವಿಷಯಗಳ ಬಗ್ಗೆ ನಿರಂತರವಾಗಿ ಮಾಹಿತಿ ನೀಡಿ ತಮ್ಮೆಲ್ಲರನ್ನೂ ಪರಸ್ಪರ ಒಂದು ಗೂಡಿಸುವಲ್ಲಿ ಪ್ರಮುಖ ಸಾಧನವಾಗಲಿ ಎಂದು ಹಾರೈಸುತ್ತೇನೆ.

ಹೊಸ ವರ್ಷ ತಮ್ಮೆಲ್ಲರಿಗೂ ಶುಭದಾಯಕವಾಗಿರಲಿ.

**-ಎಚ್. ನಾಗೇಶ್,**
ನಿರ್ದೇಶಕರು (ತಾಂತ್ರಿಕ), ಬೆಸ್ಕಾಂ



**ಸಹೋದ್ಯೋಗಿಗಳೇ,**

2012-13 ಸಾಲಿನ ವರ್ಷ ಪೂರ್ಣಗೊಂಡಿದ್ದು 2014 ಆರಂಭವಾಗಿದೆ. ಹೊಸವರ್ಷ ಹೊಸ ಅವಕಾಶ ಅದೃಷ್ಟದೊಂದಿಗೆ ಹೊಸ ಸವಾಲುಗಳನ್ನು ಹೊತ್ತು ತರುತ್ತದೆ.

ಬೆಸ್ಕಾಂನ ಗ್ರಾಹಕರಿಗೆ ಸಂಪೂರ್ಣ ತೃಪ್ತಿಕರ ಸೇವೆ ನೀಡಲು ಮತ್ತು ತಾಂತ್ರಿಕ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮಗೊಳಿಸಲು ನಾವೆಲ್ಲ ಶ್ರಮಿಸೋಣ.

ತಮ್ಮೆಲ್ಲರಿಗೂ ಹಾಗೂ ಈ ಸಂಧರ್ಭದಲ್ಲಿ ಬಿಡುಗಡೆ ಗೊಳ್ಳುತ್ತಿರುವ ಬೆಸ್ಕಾಂನ ನೂತನ ಗೃಹ ಪತ್ರಿಕೆ "ಬೆಸ್ಕಾಂ ಸ್ನೇಹಿ"ಗೂ ಶುಭ ಹಾರೈಸುತ್ತೇನೆ.

ಹೊಸ ವರ್ಷ ತಮ್ಮೆಲ್ಲರಿಗೂ ಶುಭದಾಯಕವಾಗಿರಲಿ.

**-ಬಿ.ಎಲ್.ಗುರುಪ್ರಸಾದ್,**
ನಿರ್ದೇಶಕರು (ಹಣಕಾಸು), ಬೆಸ್ಕಾಂ

# ಸಂಪಾದಕೀಯ...



ಆತ್ಮೀಯರೇ,

ಕಳೆದ ಕೆಲವು ತಿಂಗಳುಗಳಿಂದ ನಿಂತು ಹೋಗಿದ್ದ 'ಬೆಸ್ಕಾಂ' ಗೃಹ ಪತ್ರಿಕೆಯನ್ನು ಮತ್ತೆ ಆರಂಭಿಸುತ್ತಿದ್ದೇವೆ. ಎಂಟು ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿರುವ ಬೆಸ್ಕಾಂನ ನೌಕರರು ಮತ್ತು ಅಧಿಕಾರಿಗಳಿಗೆ ಹಲವು ಮಾಹಿತಿಗಳನ್ನು ತಿಳಿದುಕೊಳ್ಳಲು ಆಂತರಿಕ ಪ್ರಸಾರಕ್ಕಾಗಿ ಇಂತಹ ಪತ್ರಿಕೆಯ ಅಗತ್ಯವನ್ನು ಮನಗಂಡು ಸಂಬಂಧ ಪಟ್ಟವರೊಂದಿಗೆ ಸಮಾಲೋಚಿಸಿ ಪತ್ರಿಕೆಯನ್ನು ಹೊರತರಲು ನಿರ್ಧರಿಸಿದ್ದೇವೆ.

ಈ ಬಾರಿ "ಬೆಸ್ಕಾಂ ಸ್ನೇಹಿ" ಎಂಬ ಹೊಸ ಹೆಸರಿನೊಂದಿಗೆ ಆದಷ್ಟು ಸುಂದರವಾದ ವಿನ್ಯಾಸ ಹಾಗೂ ಮುದ್ರಣದೊಂದಿಗೆ ತ್ರೈಮಾಸಿಕದ ರೂಪದಲ್ಲಿ ಪತ್ರಿಕೆ ತಮ್ಮ ಕೈ ಸೇರಿದೆ.

ಸಂಸ್ಥೆಯ ಕಾರ್ಯ ಚಟುವಟಿಕೆಗಳ ಜತೆಗೆ ಹಲವು ಉಪಯುಕ್ತ ಮಾಹಿತಿಯನ್ನು ಒದಗಿಸುವ ಪ್ರಯತ್ನ ಮಾಡಲಾಗಿದೆ. ಹೊಸ ಸಂಪಾದಕೀಯ ಮಂಡಳಿಯ ನಮ್ಮ ಈ ಪ್ರಯತ್ನ ತಮಗೆ ಮೆಚ್ಚುಗೆಯಾದೀತೆಂದು ಭಾವಿಸಿದ್ದೇನೆ.

ಮುಂದಿನ ತ್ರೈಮಾಸಿಕ ತಮ್ಮ ಕೈಸೇರುವಾಗ ಈ ಬಾರಿಯ ಆರ್ಥಿಕ ವರ್ಷ ಮುಗಿದು ಹೋಗಿರುತ್ತದೆ. ಯಾವುದೇ ಸಂಸ್ಥೆ ಪ್ರಗತಿ ಪಥದಲ್ಲಿರುವಾಗ ಅದರ ಹಿಂದಿನ ವರ್ಷಗಳ ಆಗುಹೋಗುಗಳ ಬಗ್ಗೆ ಮೆಲುಕು ಹಾಕಿ ಭವಿಷ್ಯಕ್ಕೆ ಸೂಕ್ತ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳುವುದು ಒಂದು ಸಾಮಾನ್ಯ ಪ್ರಕ್ರಿಯೆ.

'ವಿದ್ಯುತ್ ವಿತರಣೆ' ಎನ್ನುವುದು ಒಂದು ನಿರಂತರ ಪ್ರಕ್ರಿಯೆ. ವರ್ಷದಿಂದ ವರ್ಷಕ್ಕೆ ನಾವು ಪ್ರಗತಿಯನ್ನು ಎಲ್ಲಾ ವಿಭಾಗಗಳಲ್ಲಿ ಸಾಧಿಸಬೇಕು. ಆಗ ಮಾತ್ರ ನಮ್ಮ ಅಸ್ತಿತ್ವಕ್ಕೆ ಒಂದು ಅರ್ಥಬರುತ್ತದೆ. ಈ ವಿಚಾರದಲ್ಲಿ ಎಲ್ಲರೂ ದೃಢ ಸಂಕಲ್ಪದೊಂದಿಗೆ ಕಾರ್ಯನಿರ್ವಹಿಸಿ ಸಂಸ್ಥೆಯ ಪ್ರಗತಿ ಸಾಧಿಸಲು ತಮ್ಮ ಕೊಡುಗೆಯನ್ನು ನೀಡಬೇಕೆಂಬುದು ನನ್ನ ಮನವಿ.

ವಿದ್ಯುತ್ ವಿತರಣೆಗೆ ಪೂರಕವಾಗಿರುವ ಕಾರ್ಯ ಇನ್ನಷ್ಟು ಚುರುಕಾಗಬೇಕು. ಈ ಸಂಬಂಧ ಕ್ರಿಯಾತ್ಮಕವಾಗಿ ಹಾಗೂ ಸಂಘಟನೆ ಮೂಲಕ ಕೆಲಸ ನಿರ್ವಹಿಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಇನ್ನಷ್ಟು ಕ್ರಿಯಾತ್ಮಕವಾಗಿ ಕೆಲಸ ಮಾಡುವ ಮೂಲಕ ಸಂಸ್ಥೆಯ ಪ್ರಗತಿ ಹಾಗೂ ಗ್ರಾಹಕರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗೋಣ ಎಂಬುದು ನನ್ನ ಅನಿಸಿಕೆ.


ಹೊಸರೂಪದಲ್ಲಿ "ಬೆಸ್ಕಾಂ ಸ್ನೇಹಿ"ಯನ್ನು ತಮ್ಮ ಕೈಗಿಡುತ್ತಿದ್ದೇವೆ. ಅದರ ಬೆಳವಣಿಗೆಗೆ ಅಗತ್ಯ ಸಲಹೆ ಸೂಚನೆಗಳಿಗೆ ಸದಾ ಸ್ವಾಗತ.

ತಮ್ಮೆಲ್ಲರಿಗೂ ಹೊಸವರ್ಷದ ಶುಭಾಶಯಗಳು.

ವಂದನೆಗಳೊಂದಿಗೆ,

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು (ಗ್ರಾ & ಸಂ), ಬೆಸ್ಕಾಂ

# ಬೆಸ್ಕಾಂ ಇತಿಹಾಸ





ಹಿಂದಿನ ಮೈಸೂರು ರಾಜ್ಯವು 1902 ರಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಶಿವನಸಮುದ್ರದಲ್ಲಿ ಮೊಟ್ಟ ಮೊದಲ ಬೃಹತ್ ಜಲ ವಿದ್ಯುತ್ ಯೋಜನೆಯನ್ನು ಸ್ಥಾಪಿಸಿದ ಹೆಮ್ಮೆ ಹಾಗೂ ಖ್ಯಾತಿಯನ್ನು ಪಡೆದಿದೆ. ಮುಂದುವರೆದ ದೇಶಗಳನ್ನೂ ಒಳಗೊಂಡಂತೆ, ವಿಶ್ವದಾದ್ಯಂತ ಈ ಕಾರ್ಯ ಇನ್ನೂ ಆರಂಭಿಕ ಹಂತದಲ್ಲಿತ್ತು. ಕೋಲಾರ ಚಿನ್ನದ ಗಣಿಯಲ್ಲಿ ಗಣಿ ಕಾರ್ಯಚರಣೆ ನಿಮಿತ್ತ ವಿದ್ಯುತ್ ಪೂರೈಸುವ ಸಲುವಾಗಿ ಶಿವನಸಮುದ್ರದಿಂದ ಕೆ.ಜಿ.ಎಫ್ ವರೆಗೆ ಅಧಿಕ ವೋಲ್ಟೇಜಿನಲ್ಲಿ ವಿಶ್ವದಲ್ಲೇ ದೀರ್ಘ ಉದ್ದಳತೆಯ ಪ್ರಸರಣ ಮಾರ್ಗವನ್ನು ನಿರ್ಮಿಸಲಾಯಿತು.

ಶಿವನಸಮುದ್ರ ಕೇಂದ್ರದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹಂತಹಂತವಾಗಿ 42 ಮೆಗಾ ವ್ಯಾಟ್ ಗೆ ಹೆಚ್ಚಿಸಲಾಯಿತು.ಅಧಿಕಗೊಂಡ ವಿದ್ಯುತ್ ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ, 1904ರಲ್ಲಿ 17.2 ಮೆಗಾ ವ್ಯಾಟ್ ಸಾಮರ್ಥ್ಯದ ಶಿಂಷಾ ಜಲ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಯಿತು. ಕೈಗಾರಿ–ಕೆ, ಗ್ರಾಮೀಣ ಪ್ರದೇಶಗಳ ವಿದ್ಯುದೀಕರಣ ಇವುಗಳಿಂದಾಗಿ ವಿದ್ಯುತ್ ಬೇಡಿಕೆಯು ಹೆಚ್ಚುತ್ತಲೇ ಇದ್ದುದರಿಂದ, ಉತ್ಪಾದನಾ ಸಾಮರ್ಥ್ಯವನ್ನೂ ಸಹ ಹೆಚ್ಚಿಸುವುದು ಅನಿವಾರ್ಯವಾಯಿತು. ಮಹಾತ್ಮಾ ಗಾಂಧಿ ಜಲ ವಿದ್ಯುತ್ ಯೋಜನೆಯ ಮೊದಲ ಹಂತವಾಗಿ 1948ರಲ್ಲಿ 48 ಮೆಗಾ ವ್ಯಾಟ್ ಹಾಗೂ ಎರಡನೆಯ ಹಂತವಾಗಿ 1965ರಲ್ಲಿ 72 ಮೆಗಾ ವ್ಯಾಟ್ ಸಾಮರ್ಥ್ಯದ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾಯಿತು.

ಕಡಿಮೆ ದರದ ವಿದ್ಯುತ್ ಲಭ್ಯತೆ ಹಾಗೂ ಇತರ ಮೂಲ ಸೌಕರ್ಯಗಳನ್ನೊಳಗೊಂಡ ಕರ್ನಾಟಕ ರಾಜ್ಯವು ಕೈಗಾರಿಕಾ ಚಟುವಟಿಕೆಗಳು ಪ್ರಗತಿ ಹೊಂದುವುದಕ್ಕೆ ನೆರವಾಯಿತು.ಇಡೀ ಶರಾವತಿ ಕಣಿವೆಯನ್ನು ಉಪಯೋಗಿಸಿಕೊಂಡು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಅವಶ್ಯಕತೆ ಉಂಟಾಯಿತು. 1964ರಲ್ಲಿ 89.1 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಘಟಕವನ್ನು ಅನುಷ್ಠಾನಗೊಳಿಸಿ 1977ರಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲಾಯಿತು.

60ರ ದಶಕದ ಮಧ್ಯ ಭಾಗ ಹಾಗೂ ತದನಂತರದಿಂದ, ರಾಜ್ಯದಲ್ಲಿ ಹಲವಾರು ಸರ್ಕಾರಿ ಕ್ಷೇತ್ರ ಹಾಗೂ ಖಾಸಗಿ ಕೈಗಾರಿಕೋದ್ಯಮಗಳು ಪ್ರಾರಂಭಗೊಂಡ



ಪ್ರಯುಕ್ತ ವಿದ್ಯುತ್ ಬೇಡಿಕೆಯ ಪ್ರಮಾಣ ಹೆಚ್ಚುತ್ತಾ ಹೋಯಿತು. ರಾಜ್ಯದ ವಿದ್ಯುತ್ ಉತ್ಪಾದನೆಯು ಮುಂಗಾರು ಮಳೆಯನ್ನೇ ಅವಲಂಬಿಸಿದ್ದರಿಂದ, ರಾಜ್ಯ ಸರ್ಕಾರವು ರಾಯಚೂರಿನಲ್ಲಿ ಶಾಖೋತ್ಪನ ವಿದ್ಯುತ್ ಕೇಂದ್ರವನ್ನು ಸ್ಥಾಪಿಸಿತು. ಪ್ರಸ್ತುತ, ರಾಯಚೂರು ಶಾಖೋತ್ಪನ ವಿದ್ಯುತ್ ಕೇಂದ್ರದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ 1260 ಮೆಗಾ ವ್ಯಾಟ್ ರಾಜ್ಯದ ವಿದ್ಯುತ್ ಸಂಪನ್ಮೂಲಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಕಾಳಿನದಿ ಯೋಜನೆ ಮೂಲಕ ನಾಗಝರಿ ಪವರ್ ಹೌಸ್ ನಲ್ಲಿ 810 ಮೆಗಾ ವ್ಯಾಟ್ ಹಾಗೂ ಸೂಪಾ ಅಣೆಕಟ್ಟು ಯೋಜನೆಯ ಮೂಲಕ 100 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲಾಯಿತು.

1957 ರವರೆಗೆ ರಾಜ್ಯದ ವಿದ್ಯುತ್ ಪ್ರಸರಣ ಹಾಗೂ ವಿತರಣೆಯ ಜವಾಬ್ದಾರಿಯು ಕರ್ನಾಟಕ ರಾಜ್ಯದ (ಹಿಂದಿನ ಮೈಸೂರು ರಾಜ್ಯ) ನಿಯಂತ್ರಣದಲ್ಲಿ ಇತ್ತು. 1957 ರಲ್ಲಿ ಮೈಸೂರು ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು ರಚನೆಗೊಂಡು, ಖಾಸಗಿ ವಿತರಣ ಕಂಪನಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯೊಂದಿಗೆ ವಿಲೀನಗೊಳಿಸಲಾಯಿತು.

1986 ರವರೆಗೆ, ಕವಿಮಂಡಳಿಯು ಲಾಭದಾಯಕ ಸಂಸ್ಥೆಯಾಗಿತ್ತು. ಆದರೆ ತದನಂತರದಲ್ಲಿ, ದೇಶದ ಇತರ ರಾಜ್ಯಗಳ ವಿದ್ಯುತ್ ಮಂಡಳಿಗಳಂತೆ, ಕವಿಮಂಡಳಿಯೂ ಸಹ ನಷ್ಟದ ಸಂಸ್ಥೆಯಾಗತೊಡಗಿತು. ಇದಕ್ಕೆ ಕಾರಣ, ಅಧಿಕಗೊಳ್ಳತೊಡಗಿದ ಕೃಷಿ ಕ್ಷೇತ್ರದ ವಿದ್ಯುತ್ ಬಳಕೆ ಹಾಗೂ ಸರ್ಕಾರದ ಸಮಾಜಿಕ ಹಾಗೂ ಆರ್ಥಿಕ ನೀತಿಗಳ ಅನುಷ್ಠಾನ.

ವಿದ್ಯುತ್ ಕ್ಷೇತ್ರದ ಕಾರ್ಯಚರಣೆಯನ್ನು ಉತ್ತಮಪಡಿಸಲು ಹಾಗೂ ಭಾರತ ಸರ್ಕಾರದ ಸುಧಾರಣಾ ಪ್ರಕ್ರಿಯೆಗಳಿಗೆ ಸ್ಪಂದಿಸುವ ಸಲುವಾಗಿ ಕರ್ನಾಟಕ ಸರ್ಕಾರವು ವಿದ್ಯುತ್ ಕ್ಷೇತ್ರದಲ್ಲಿ ಆಮೂಲಾಗ್ರ ಸುಧಾರಣಾ ಪ್ರಸ್ತಾವವನ್ನು ಹೊರತಂದಿತು. ಪರಿಣಾಮವಾಗಿ, ಕರ್ನಾಟಕ ಶಾಸಕಾಂಗ ಸಭೆಯು ಅನುಮೋದಿಸಿದ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಕಾಯಿದೆಯು ಜಾರಿಗೆ ಬಂದಿತು. ಈ ಸುಧಾರಣೆಯು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ನಿಗಮೀಕರಣದ ಪ್ರಯುಕ್ತ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ವಿಸರ್ಜಿತಗೊಂಡು, ಅಗಸ್ಟ್ 1, 1999ರಿಂದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವೆಂದು ರಚನೆಯಾಯಿತು.


ಸುಧಾರಣಾ ಪ್ರಕ್ರಿಯೆಯ ಅಂಗವಾಗಿ, ವಿತರಣಾ ಕ್ಷೇತ್ರವನ್ನು 5 ಕಂಪನಿಗಳಾಗಿ ವಿಭಜಿಸಲಾಯಿತು. ಅಂದರೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನ ನಿಯಮಿತ (ಹೆಸ್ಕಾಂ), ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ) ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ(ಜೆಸ್ಕಾಂ) ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಈ ಕಂಪನಿಗಳೂ ಜೂನ್ 1, 2002 ರಿಂದ ಅಸ್ತಿತ್ವಕ್ಕೆ ಬಂದವು.

## BESCOM PROGRESS IN LAST 8 YEARS

| Sl. No | DETAILS | AS ON 31.03.2004 | AS ON 31.03.2012 |
|---|---|---|---|
| 1. | Jurisdiction Districts | 6 | 8 |
| 2. | Number of Consumers | 5.02 Millions | 7.96 Millions |
| 3. | H.T. Line Length | 50611 ckt KMs | 75074 ckt KMs |
| 4. | L.T. Line Length | 132419 ckt KMs | 150105 ckt KMs |
| 5. | Number of DTC's | 72243 | 161905 |
| 6. | Assets | Rs. 1533 crores | Rs. 8596.07 crores |

ಇದರ ಅಂಗವಾಗಿ ಈಗ ಕಾರ್ಯನಿರ್ವಹಿಸುತ್ತಿರುವ ಬೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು ಎಂಟು ಜಿಲ್ಲೆಗಳು ಸೇರಿವೆ. ಅವುಗಳೆಂದರೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳು.

# ಬೆಸ್ಕಾಂ ವೆಬ್‌ಸೈಟ್‌ಗೆ ಹೊಸ ರೂಪ



2003 ರಲ್ಲಿ ಮೊಟ್ಟಮೊದಲ ಬಾರಿಗೆ ಆರಂಭಗೊಂಡ ಬೆಸ್ಕಾಂನ ವೆಬ್‌ಸೈಟ್ ಕಾಲಕಾಲಕ್ಕೆ ಬದಲಾಗುತ್ತ ಬಂದಿದೆ. 30–11–2013 ರಂದು ನಡೆದ ಕಾರ್ಯಕ್ರಮದಲ್ಲಿ ಡಾ: ಅಮಿತಾ ಪ್ರಸಾದ್, ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ ಇವರು ಹೊಸರೂಪದ ವೆಬ್‌ಸೈಟ್‌ಗೆ ವಿದ್ಯುಕ್ತವಾಗಿ ಚಾಲನೆ ನೀಡಿದರು.

ನೂತನ ವಿನ್ಯಾಸದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆಸ್ಕಾಂನ ವೆಬ್‌ಸೈಟ್ www.bescom.orgಯಲ್ಲಿ ಗ್ರಾಹಕರಿಗೆ ಅತ್ಯವಶ್ಯವಾದ ಸೇವೆಗಳನ್ನು ಪ್ರತ್ಯೇಕ ಐಕಾನ್‌ಗಳಲ್ಲಿ ನೀಡಿರುವುದು ವಿಶೇಷ. ಹೊಸ ವಿನ್ಯಾಸದ ವೆಬ್ ಸೈಟ್‌ನ್ನು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪಂಕಜ್ ಕುಮಾರ ಪಾಂಡೆ ಹಾಗೂ ತಾಂತ್ರಿಕ ನಿರ್ದೇಶಕರಾದ ಶ್ರೀ ಎಚ್. ನಾಗೇಶ್ ಕುತೂಹಲದಿಂದ ವೀಕ್ಷಿಸುತ್ತಿರುವುದು ಚಿತ್ರದಲ್ಲಿ ಕಾಣಬಹುದು.